# ರೀಮೇಕ್ ಸುಖದಲ್ಲಿ ಅಮೀರ್



ಅಮೀರ್ ಖಾನ್ ಕೂಡ ಕನ್ನಡದ ರವಿಚಂದ್ರನ್ ಅವರಂತೆಯೇ ಒಂದು ಡೈಲಾಗ್ ಹೊಡೆದಿದ್ದಾರೆ. ರೀಮೇಕ್ ಮಾಡೋದು ತಮಗೆ ಇಷ್ಟ ಎನ್ನುವುದೇ ಆ ಡೈಲಾಗ್. ಕನ್ನಡದಲ್ಲಿ ರವಿಚಂದ್ರನ್ ವೃತ್ತಿಬದುಕಿನ ಹಲವು ಚಿತ್ರಗಳು ರೀಮೇಕ್. ವಿಷ್ಣುವರ್ಧನ್, ದ್ವಾರಕೀಶ್ ಹಾಕಿಕೊಟ್ಟ ಹಾದಿ ಅದು. ಅವರೆಲ್ಲ ಭಾರತದ್ದೇ ಬೇರೆ ಭಾಷೆಯ ಚಿತ್ರಗಳನ್ನು ರೀಮೇಕ್ ಮಾಡುತ್ತಿದ್ದರು. ಆದರೆ, ಅಮೀರ್ ಖಾನ್ ಬೇರೆ ದೇಶಗಳ ಚಿತ್ರಗಳ ಮೇಲೆ ಕಣ್ಣಿಟ್ಟಿದ್ದಾರೆ. 'ಫಾರೆಸ್ಟ್ ಗಂಪ್' ಸಿನಿಮಾ ಎತ್ತಿಕೊಂಡು 'ಲಾಲ್ ಸಿಂಗ್ ಛಡ್ಡಾ' ಮಾಡಿ ಸೋತರು. ಈಗ 'ಚಾಂಪಿಯನ್ಸ್' ಸ್ಪ್ಯಾನಿಷ್ ಸಿನಿಮಾದಿಂದ ಕಥನ ಕೊಂಡು ತಂದು 'ಸಿತಾರೆ ಜಮೀನ್ ಪರ್' ಹೊಸೆದಿದ್ದಾರೆ.

ಶೇಕ್ಸ್‌ಪಿಯರ್ ಸಾರ್ವಕಾಲಿಕ ಶ್ರೇಷ್ಠ ನಾಟಕ 'ರೋಮಿಯೋ ಜೂಲಿಯೆಟ್'ನಿಂದ ಸ್ಫೂರ್ತಿ ಪಡೆದ 'ಕಯಾಮತ್ ಸೆ ಕಯಾಮತ್' ಹಿಂದಿ ಸಿನಿಮಾ ಆಗಲೀ, ತಮಿಳಿನಿಂದ ರೀಮೇಕ್ ಮಾಡಿದ 'ಗಜಿನಿ' ಆಗಲಿ ಅವರಿಗೆ ದೊಡ್ಡ ಹಿಟ್ ನೀಡಿದ್ದವು.

'ರೀಮೇಕ್ ಸಿನಿಮಾ ಮಾಡುವುದು ನನಗೆ ಇಷ್ಟ. ಇಷ್ಟ ಆದ ಕಥೆಯನ್ನು ನಮ್ಮ ಪರಿಸರಕ್ಕೆ ಒಗ್ಗಿಸಿ ಮರುಸೃಷ್ಟಿ ಮಾಡುವ ಒಳ್ಳೆಯ ಪ್ರಕ್ರಿಯೆ ಅದು. ನನಗೆ ಖುಷಿ ಕೊಡುವ ರೀಮೇಕ್ ಸಿನಿಮಾಗಳನ್ನು ಮಾಡುತ್ತಲೇ ಇರುತ್ತೇನೆ. ನೋಡಲು ಇಷ್ಟ ಇರುವವರು ನೋಡಬಹುದು. ಇಲ್ಲವಾದವರು ತಮ್ಮಿಷ್ಟದಂತೆ ಬೇರೆ ಸಿನಿಮಾ ನೋಡಬಹುದು. ನಾನಂತೂ ನನಗೆ ಇಷ್ಟವಾದ ಸಿನಿಮಾಗಳನ್ನು ರೀಮೇಕ್ ಮಾಡಲು ಬದ್ಧ. ಲಾಲ್ ಸಿಂಗ್ ಛಡ್ಡಾ ಒಂದನ್ನು ಹೊರತುಪಡಿಸಿ ಮಿಕ್ಕೆಲ್ಲ ರೀಮೇಕ್ ಚಿತ್ರಗಳು ಗೆಲುವನ್ನೇ ತಂದು ಕೊಟ್ಟಿದ್ದವು' ಎಂದು ಅಮೀರ್ ಕಡ್ಡಿ ತುಂಡು ಮಾಡಿದಂತೆ ಹೇಳಿದ್ದಾರೆ.



# ರಾಧಿಕಾ ಪಾತ್ರ ಪ್ರಯೋಗ

'ಸಿಸ್ಟರ್ ಮಿಡ್‌ನೈಟ್' ಎಂಬೊಂದು ಸಿನಿಮಾ ಈಗ ತನ್ನ ಭಿನ್ನ ಶೈಲಿಯ ಬ್ಲ್ಯಾಕ್ ಕಾಮಿಡಿ ಕಾರಣಕ್ಕೆ ಸದ್ದು ಮಾಡುತ್ತಿದೆ. ಈ ಚಿತ್ರವು ನಟಿಯಾಗಿ ರಾಧಿಕಾ ಆಪ್ಟೆ ಅವರಿಗೆ ಜಗಿತ ಎಂದೇ ವಿಶ್ಲೇಷಿಸಲಾಗುತ್ತಿದೆ. ಚಿತ್ರದ ನಿರ್ದೇಶಕ ಕರಣ್ ಈಗ ಇಂಗ್ಲೆಂಡ್‌ನಲ್ಲಿ ವಾಸವಿದ್ದಾರೆ. ಅವರು ಸ್ಕ್ರಿಪ್ಟ್ ಬರೆದದ್ದು ಇಂಗ್ಲಿಷ್ ಭಾಷೆಯಲ್ಲಿ. ಅದನ್ನು ರಾಧಿಕಾ ತೆರೆಮೇಲೆ ಅಭಿನಯದ ಮೂಲಕ ಜೀವಗೊಳಿಸಿದ ಪ್ರಸಂಗವೇ ಒಂದು ಪ್ರಬಂಧಕ್ಕೆ ವಸ್ತು ಆಗಬಲ್ಲದು. ರಾಧಿಕಾ ನೃತ್ಯ ತರಬೇತಿ ಪಡೆದಿದ್ದಾರೆ. ನಟನೆಯ ವಿಷಯದಲ್ಲಿ ಅವರಿಗೆ ಪ್ರತಿ ಸಿನಿಮಾ ಒಂದು ಕಮ್ಮತದ ಹಾಗೆ. ಈ ಚಿತ್ರದಲ್ಲಿ ಅಭಿನಯಿಸಲು ಸಹಿ ಹಾಕಿದಾಗಲೂ ಅವರಲ್ಲಿ ಅದೇ ಭಾವ ಇತ್ತು. ಆದರೆ, ಚಿತ್ರೀಕರಣ ಶುರುವಾದಾಗ ಕರಣ್ ಕೆಲಸದ ಶೈಲಿ ಭಿನ್ನ ಎಂದು ಅರಿವಾಯಿತು.

ಸಾಮಾನ್ಯವಾಗಿ ಅಭಿನಯ ಕುರಿತ ಟಿಪ್ಪಣಿಯನ್ನು ನಿರ್ದೇಶಕರು ಮೊದಲೇ ಸಿದ್ಧಪಡಿಸಿ ಇಟ್ಟಿರುವುದು ರೂಢಿ. ಈ ಸಿನಿಮಾದಲ್ಲಿ ಹಾಗೆ ಆಗಲಿಲ್ಲ. ಎಷ್ಟು ಸಾಧ್ಯವೋ ಅಷ್ಟೂ ಅರ್ಥವನ್ನು ನಟನೆಗೆ ತುಂಬುವ ಸವಾಲನ್ನು ನಿರ್ದೇಶಕರು ಮುಂದಿಟ್ಟರು. ಮೊದ ಮೊದಲು ಇದು ಕಠಿಣ ಎನ್ನಿಸಿ, ರಾಧಿಕಾ ಮಾನಸಿಕವಾಗಿ ದಣಿದದ್ದೂ ಉಂಟು. ಕ್ರಮೇಣ ಹೊಸ ಶೈಲಿಯ ಚಿತ್ರೀಕರಣಕ್ಕೆ ಒಗ್ಗಿಕೊಂಡರು.

ಈ ಪ್ರಕ್ರಿಯೆಯನ್ನು ರಾಧಿಕಾ ದಾಟಿಸಿರುವುದು ಹೀಗೆ: 'ನಾನು ನಡೆದು ಸಾಗಿ, ಆಮೇಲೆ ಎಡಕ್ಕೆ ತಿರುಗುವ ದೃಶ್ಯವೊಂದು ಇದೆ. ಬಹುತೇಕ ನಿರ್ದೇಶಕರು ಆಂಗಿಕ ಭಾಷೆ ಹೇಗೆ ಇರಬೇಕು ಎಂದು ಸಂಕ್ಷಿಪ್ತವಾಗಿ ಹೇಳಿ, ಆಮೇಲೆ ಅಭಿನಯಿಸಲು ತಿಳಿಸುವುದು ಸಹಜವಾದ ಕ್ರಮ. ಕರಣ್ ಹಾಗೆ ಮಾಡಲಿಲ್ಲ. ಅವರು ಆ ಕ್ಷಣದಲ್ಲಿ ಉಮಾ ಎಂಬ ಪಾತ್ರವನ್ನು ಜೀವಿಸಿ, ನಡೆದು ಸಾಗುವಂತೆ ಸೂಚಿಸಿದರು. ಉಮಾ ಯಾವ ಸಂಸ್ಕೃತಿಯ ಹೆಣ್ಣುಮಗಳು ಎನ್ನುವುದು ನನ್ನ ತಲೆಯಲ್ಲಿ ಇತ್ತು. ತಕ್ಷಣಕ್ಕೆ ದೇಹ ಹಾಗೂ ಮನಸ್ಸಿನ ನಡುವೆ ಒಂದು ಸಂವಹನ ಏರ್ಪಟ್ಟು, ನಾನು ನಡೆಯುವ ಶೈಲಿಯನ್ನು ನಿರ್ಧರಿಸಬೇಕಿತ್ತು. ಇನ್‌ಸ್ಟಂಟ್ ಆದ ನಟನಾ ಶೈಲಿ ಅದು. ರಂಗಭೂಮಿಯಲ್ಲಿ ಎಷ್ಟೋ ನುರಿತರು ಈ ತಂತ್ರ ಅನುಸರಿಸಿ, ಗೆದ್ದಿದ್ದಾರೆ. ಕ್ಯಾಮೆರಾ ಎದುರು ಇದು ಸಲೀಸಲ್ಲ. ಅದನ್ನು ನಾನು ಅಭಿನಯಿಸಿ, ಅವರನ್ನು ಒಪ್ಪಿಸಿದ್ದು ಒಂದು ಬಗೆಯ ಹೆಮ್ಮೆ ಮೂಡಿಸಿತ್ತು'.

'ಸಿಸ್ಟರ್ ಮಿಡ್‌ನೈಟ್' ಚಿತ್ರದಲ್ಲಿ ನಿರ್ದೇಶಕರು ಮೌನಕ್ಕೆ ಹೆಚ್ಚು ಸ್ಥಳಾವಕಾಶ ಕಲ್ಪಿಸಿದ್ದರು. ಹಾಗಾಗಿ ಭಾವಾಭಿನಯದಿಂದಲೇ ಹೆಚ್ಚಿನ ಸಂಗತಿಗಳನ್ನು ಪ್ರೇಕ್ಷಕರಿಗೆ ದಾಟಿಸುವ ಸವಾಲು ರಾಧಿಕಾ ಅವರಿಗೆ ಎದುರಾಗಿತ್ತು. ಇಂತಹ ಸಿನಿಮಾಗಳ ಅನುಭವ ನಟಿಯಾಗಿ ತಮಗೆ ಬೆಳೆಯುವ ಇನ್ನಷ್ಟು ದಾರಿಗಳನ್ನು ಕಾಣಿಸುತ್ತದೆ ಎನ್ನುವ ಅವರು, ತಾವು ಯಾವತ್ತೂ ಪ್ರಯೋಗಮುಖಿ ಎಂದು ಕಣ್ಣರಳಿಸುತ್ತಾರೆ.